C.C. No.
PW. C.W.

# 37 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

## ಸಿ.ಸಿ. ನಂ. 8861/2015

**ಪ್ರಾ.ಸಃ 6 ಚಾ.ಸಃ 7**

| | |
|---|---|
| **ಸಾಕ್ಷಿದಾರರ ಹೆಸರು** | ಗೋವಿಂದ ರಾಜು |
| **ತಂದೆಯ/ಗಂಡನ ಹೆಸರು** | ಮುನಿವೆಂಕಟಪ್ಪ |
| **ವಯಸ್ಸು** | 67 ವರ್ಷ |
| **ಉದ್ಯೋಗ** | ಖಾಸಗಿ ಕೆಲಸ |
| **ವಿಳಾಸ** | ಜೆ.ಪಿ ನಗರ, ಬೆಂಗಳೂರು. |
| **ಪ್ರ ವ ಬೋ ದಿನಾಂಕ** | 10/01/2024 |

**ಮುಖ್ಯ ವಿಚಾರಣೆಃ ಹಿ.ಸ.ಸ. ಅ ರವರಿಂದಃ**

ಈ ಪ್ರಕರಣದ ಆರೋಪಿತರು ನನಗೆ ಗೊತ್ತು. ನನಗೆ ಚಾಸಾ.1 ರವರ ಪರಿಚಯ ಇದೆ, ಅವರ ತಂದೆ ತಿಮ್ಮಯ್ಯ ಸಹ ನನಗೆ ಪರಿಚಯು ಇದ್ದಾರೆ. ಚಾಸಾ.1 ರವರ ಮದುವೆ ವಿಚಾರಗಳು ನನಗೆ ಗೊತ್ತಿದೆ. ದಿ. 06/05/2013 ರಂದು ಒಂದನೇ ಆರೋಪಿ ಮತ್ತು ಚಾಸಾ.1 ರವರ ಮದುವೆ ಮಾಗಡಿಯ ಆರ್.ಆರ್. ಪ್ಯಾಲೇಸ್ ನಲ್ಲಿ ನಡೆದಿರುತ್ತದೆ. ಮದುವೆ ಪೂರ್ವದಲ್ಲಿ ಆರೋಪಿತರು ಚಾಸಾ.1 ರವರನ್ನು ನೋಡಲು ಅವರ ಮನೆ ಗುರಪ್ಪನಪಾಳ್ಯಕ್ಕೆ ಬಂದಿರುತ್ತಾರೆ, ಆ ಸಂದರ್ಭದಲ್ಲಿ ನಾನು ಇದ್ದೆ. ಮದುವೆ ಮಾತುಕತೆಗೆ ನಾನು, ಹರೀಸಿಂಗ್, ಸಿದ್ದಪ್ಪ, ಅಶ್ವಥಯ್ಯ ಮತ್ತು ಚಾಸಾ.1 ರವರ ತಂದೆ ಸೇರಿದ್ದೇವು, ಮದುವೆ ಮಾತುಕತೆಯಲ್ಲಿ ಹುಡುಗನಿಗೆ ಉಂಗುರ, ಬ್ರೇಸ್ ಲೇಟ್, ಕತ್ತಿನ ಚೈನು ಮತ್ತು ಮೂರು ಲಕ್ಷ ಹಣ ಕೊಡುವಂತೆ ಆರೋಪಿತರು ಕೇಳಿರುತ್ತಾರೆ ಮತ್ತು ಹುಡುಗಿಗೆ ಒಂದು ಓಲೆ, ಹ್ಯಾಂಗಿಗ್ಸ್ ಮತ್ತು ಮಾಂಗಲ್ಯ ಸರ ಒಡವೆಗಳನ್ನು ನೀವೇ ಹಾಕಬೇಕು ಎಂದು

ಆರೋಪಿತರು ಕೇಳಿರುತ್ತಾರೆ, ಕೇಳಿದಂತೆ ಅವುಗಳನ್ನು ನೀಡಿ ಚಾಸಾ.1 ರವರು ತಂದೆ ಮದುವೆ ಮಾಡಿ ಕೊಟ್ಟಿರುತ್ತಾರೆ.

2. ಮದುವೆಯಾದ ನಂತರ ಚಾಸಾ.1 ಮತ್ತು 1 ರಿಂದ 3 ನೇ ಆರೋಪಿತರೊಂದಿಗೆ ಗುರುಪ್ಪನಪಾಳ್ಯದಲ್ಲಿ ವಾಸವಾಗಿರುತ್ತಾರೆ. ಸ್ವಲ್ಪ ದಿನ ಚೆನ್ನಾಗಿದ್ದು, ನಂತರದಲ್ಲಿ ಆರೋಪಿತರು ಚಾಸಾ.1 ರವರಿಗೆ ನಿನ್ನ ತವರು ಮನೆಯಿಂದ ಸೈಟ್ ತೆಗೆದುಕೊಂಡು ಬಾ ಎಂದು ಆರೋಪಿತರು ಗಲಾಟೆ ಮಾಡಿರುತ್ತಾರೆ. ಆರೊಪಿತರು ಚಾಸಾ.1 ರವರಿಗೆ ವರದಕ್ಷಿಣೆ ತರುವಂತೆ ಒತ್ತಾಯ ಮಾಡಿರುತ್ತಾರೆ. ಚಾಸಾ.1 ರವರ ತಂದೆ ನನಗೆ ಈ ವಿಚಾರಗಳನ್ನು ನನಗೆ ತಿಳಿಸಿರುತ್ತಾರೆ. ಈ ಬಗ್ಗೆ ರಾಜಿ ಪಂಚಾಯ್ತಿ ಮಾಡಿದಾಗ ನಾನು ಆ ರಾಜಿ ಪಂಚಾಯ್ತಿಯಲ್ಲಿ ಹಾಜರಾಗಿ 1 ರಿಂದ 3 ನೇ ಆರೋಪಿತರಿಗೆ ಬುದ್ದಿಮಾತು ಹೇಳಿರುತ್ತೇನೆ. ಆರೋಪಿತರು ಒಂದನೇ ಆರೊಪಿಗೆ ಒಂದು ಮನೆ ಬಾಡಿಗೆ ಮಾಡಿಕೊಡುವಂತೆ ಕೇಳಿರುತ್ತಾರೆ, ಅದರಂತೆ ಚಾಸಾ.1 ರವರ ತಂದೆ ಜಯನಗರದ, 4 ನೇ ಟಿ ಬ್ಲಾಕ್ ನಲ್ಲಿ ಒಂದು ಮನೆಯನ್ನು ಬಾಡಿಗೆಗೆ ಮಾಡಿಕೊಟ್ಟಿರುತ್ತಾರೆ. ಆ ಸಂಬಂಧವಾಗಿ 1 ರಿಂದ 3 ನೇ ಆರೋಪಿತರು ಚಾಸಾ.1 ರವರ ತಂದೆಯಿಂದ 2 ಲಕ್ಷ ಹಣ ಪಡೆದಿರುತ್ತಾರೆ. ಸದರಿ ಮನೆಯಲ್ಲಿ ಚಾಸಾ.1 ಮತ್ತು ಒಂದನೇ ಆರೋಪಿ ವಾಸವಿದ್ದಾಗಲೂ ಸಹ ಆರೋಪಿತರುಗಳೆಲ್ಲರೂ ಚಾಸಾ.1 ರವರಿಗೆ ನೀನು ಸರಿಯಿಲ್ಲ, ಮನೆಯನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂದು ನಿಂದಿಸುತ್ತಿದ್ದ ಬಗ್ಗೆ ಚಾಸಾ.1 ರವರು ನನಗೆ ತಿಳಿಸಿರುತ್ತಾರೆ. ನಂತರ ಆರೋಪಿತರು ಚಾಸಾ.1 ರವರಿಗೆ ತವರು ಮನೆಯಿಂದ ಹಣ ತಂದಿಲ್ಲವೆಂದು ಹೊಡೆದಿರುತ್ತಾರೆ. ಆ ವಿಚಾರ ಸಹ ಚಾಸಾ.1 ರವರು ನನಗೆ ತಿಳಿಸಿರುತ್ತಾರೆ. ಆ ಕಾರಣಕ್ಕೆ ಚಾಸಾ.1 ರವರು ಆರೋಪಿತರ ವಿರುದ್ದ ದೂರು ನೀಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಆರೋಪಿತರನ್ನು ಈಗ ನ್ಯಾಯಲಯದ ಮುಂದೆ ನೋಡಿ ಗುರುತಿಸುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

C.C. No.
PW. C.W.

**<u>ಪಾಟೀ ಸವಾಲುಃ ಹಿ. ಸ. ಸ. ಅ ವಕೀಲರಿಂದಃ</u>**

ಚಾಸಾ.1 ರವರಿಗೆ ಆರೋಪಿತರೆಲ್ಲರೂ ತವರು ಮನೆಯಿಂದ ಹೆಚ್ಚಿನ ವರದಕ್ಷಿಣೆ ತರುವಂತೆ ಒತ್ತಾಯಿಸಿ, ಅವಾಚ್ಯ ಶಬ್ದಗಳಿಂದ ಬೈದು, ಪ್ರಾಣ ಬೆದರಿಕೆ ಹಾಕಿದ ವಿಚಾರ ಚಾಸಾ.1 ರವರು ನನಗೆ ತಿಳಿಸಿದರು ಎಂದರೆ ಸರಿ.

**<u>ಪಾಟೀ ಸವಾಲುಃ ಶ್ರೀ ಎಸ್.ಎನ್.ಆರ್ ಆರೋಪಿತರ ಪರ ವಕೀಲರಿಂದಃ</u>**

1. ಒಂದನೇ ಆರೋಪಿ ನನ್ನ ವಿರುದ್ದ ನಾನು ಅವರಿಗೆ ವಂಚನೆ ಮಾಡಿದ ಬಗ್ಗೆ ನ್ಯಾಯಲಯದಲ್ಲಿ ಖಾಸಗಿ ದೂರನ್ನು ಸಲ್ಲಿಸಿದ್ದು ನಂತರ ತಿಲಕ್ ನಗರ ಪೊ.ಠಾಣೆಯಲ್ಲಿ ಠಾಣಾ ಗುನ್ನಾ ನಂ.120/2017 ರಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ಪ್ರಕರಣದ ಬಗ್ಗೆ ನನಗೆ ಗೊತ್ತಿದ್ದರೂ ಸಹ ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ, ಆಕಾರಣ ನಾನು ಚಾಸಾ.1 ರವರಿಗೆ ಸಹಾಯವಾಗಲೀ ಎಂದು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕಡತದಲ್ಲಿರುವ ಮದುವೆ ಪೊಟೋಗಳನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ತಾವು ಇರುವಿರಾ ಎಂಬ ಪ್ರಶ್ನೆಗೆ ಆ ಪೊಟೋಗಳನ್ನು ನೋಡಿ ನಾನು ಅದರಲ್ಲಿ ಇಲ್ಲ ಎಂದು ನುಡಿಯುತ್ತಾರೆ. ಚಾಸಾ.1 ಮತ್ತು ಒಂದನೇ ಆರೋಪಿತನ ಮದುವೆ ಮಾತುಕತೆ ಫೆಬ್ರವರಿ 2013 ರಲ್ಲಿ ನಡೆದಿರುತ್ತದೆ. ದಿನಾಂಕ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣೆಯಲಿಲ ಹೇಳಿದಂತೆ ಆರೋಪಿತರು ನಗದು ಹಣ ಮತ್ತು ಚಿನ್ನದ ಒಡವೆಗಳನ್ನು ಕೊಡುವಂತೆ ಚಾಸಾ.1 ರವರ ತಂದೆಯ ಬಳಿ ಬೇಡಿಕೆ ಇಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ತಂದೆ ಯಾವುದೇ ನಗದು ಹಣ ಮತ್ತು ಚಿನ್ನದ ಒಡವೆಗಳನ್ನು ಆರೋಪಿತರಿಗೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

C.C. No.
PW. C.W.

2. ಪೊಲೀಸರಿಗೆ ನಾನು ಯಾವ ದಿನಾಂಕದಂದು ಹೇಳಿಕೆ ಕೊಟ್ಟಿರುತ್ತೇನೆ ಎಂದು ನನೆ ನೆನಪಿಲ್ಲ, ನಾನು ಪೊ.ಠಾಣೆಗೆ ಹೋಗಿಲ್ಲ ಮತ್ತು ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರು ಅವರಿಗೆ 1 ರಿಂದ 3 ನೇ ಆರೋಪಿತರು ಹೊಡೆದು ಗಾಯ ಪಡಿಸಿದ ಬಗ್ಗೆ ವೈದ್ಯರಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದು, ಆ ದಾಖಲೆಗಳನ್ನು ನನಗೆ ತೋರಿಸಿರುತ್ತಾರೆ. ಚಾಸಾ.1 ರವರು ನನಗೆ ವೈದ್ಯರ prescription ಚೀಟಿಯನ್ನು ತೋರಿಸಿರುತ್ತಾರೆ. ಚಾಸಾ.1 ರವರಿಗೆ ಅನುಕೂಲವಾಗಲೀ ಎಂದು ಮತ್ತು ಅವರು ನನಗೆ ಹೇಳಿಕೊಟ್ಟಂತೆ ನ್ಯಾಯಲಯದಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲಲ, ಚಾಸಾ.1 ರವರು ನನಗೆ ಯಾವುದೇ ರೀತಿ prescription ಚೀಟಿಯನ್ನು ತೋರಿಸಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ.1 ಮತ್ತು ಒಂದನೇ ಆರೋಪಿತನ ಮದುವೆ ಮಾತುಕತೆಯಲ್ಲಿ ಭಾಗಿಯಾಗಿಲ್ಲ ಮತ್ತು ನಾನು ಯಾವುದೇ ರಾಜಿ-ಪಂಚಾಯ್ತಿಯಲ್ಲಿ ಭಾಗಿಯಾಗಿಲ್ಲ ಎಂದರೆ ಸರಿಯಲ್ಲ. ಚಾಸಾ.1 ರವರ ತಂದೆ ಒಂದನೇ ಆರೋಪಿಗೆ ಬಾಡಿಗೆ ಮನೆ ಮಾಡಲು ಎರಡು ಲಕ್ಷ ಹಣ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ಹಣವನ್ನು ಆರೋಪಿತನ ತಂದೆ ಆರೋಪಿಗೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

**ಓ.ಹೇ. ಕೇ. ಸ. ಇ. ಒ**

**37 ನೇ ಅ.ಮು. ಮ. ದಂ. ನ್ಯಾ.**